

ರೋಸ್ ಬಿಚ್ಚಿಟ್ಟಿದ್ದ ಗುಲಾಬಿ ಬಣ್ಣದ ಚಪ್ಪಲಿಯಲ್ಲಿ ಒಂದನ್ನು ಕಚ್ಚಿಕೊಂಡು ಎತ್ತರಕ್ಕೆ ಹಾರಿ ಹೋಯಿತು. ಅದನ್ನು ಕಂಡು ರೋಸ್ ದಂಗಾಗಿ ಹೋದಳು. ಅವಳ ಸುಂದರವಾದ ಕಾಲುಗಳಿಗೆ ರತ್ನಖಚಿತವಾದ ಗುಲಾಬಿ ಬಣ್ಣದ ಚಪ್ಪಲಿಗಳು ತುಂಬಾ ಆಕರ್ಷಕವಾಗಿ ಕಾಣುತ್ತಿದ್ದವು. ಗರುಡಪಕ್ಷಿ ತನ್ನ ಒಂದು ಚಪ್ಪಲಿಯನ್ನು ಕಚ್ಚಿಕೊಂಡು ಹೋಗುತ್ತಿದ್ದುದ್ದನ್ನು ಕಂಡು ತನ್ನ ತಂದೆಗೆ ವಿಷಯವನ್ನು ತಿಳಿಸಲು ಅಲ್ಲಿಂದ ಮನೆಯ ಕಡೆಗೆ ಓಡಿ ಹೋದಳು. ಆದರೆ ಖರಾ ವ್ಯಾಪಾರಕ್ಕಾಗಿ ಬೇರೆ ನಗರಕ್ಕೆ ಹೊರಟು ಹೋಗಿದ್ದನು.

ಗರುಡಪಕ್ಷಿ ಚಪ್ಪಲಿಯನ್ನು ರಾಜನ ಅರಮನೆಗೆ ಎತ್ತಿಕೊಂಡು ಬಂದಿತು. ಅರಮನೆಯಲ್ಲಿ ರಾಜನು ತನ್ನ ಸಿಂಹಾಸನದಲ್ಲಿ ಕುಳಿತು ಸಭಾಸದರು, ಮಂತ್ರಿಗಳ ಜೊತೆ ಗಹನವಾದ ವಿಷಯವೊಂದನ್ನು ಚರ್ಚಿಸುತ್ತಿದ್ದನು. ಗರುಡಪಕ್ಷಿಯು ಅಲ್ಲಿಗೆ ಹಾರಿ ಬಂದುದರಿಂದ ಜೋರಾಗಿ ಗಾಳಿ ಬೀಸಲು ಪ್ರಾರಂಭವಾಯಿತು. ಸಭೆಯಲ್ಲಿ ಸೇರಿದ್ದ ಜನರೆಲ್ಲರೂ ಏನೆಂದು ಬೆರಗಾಗಿ ನೋಡುವಾಗ ಗರುಡಪಕ್ಷಿಯು ಹಾರುತ್ತಾ ಬಂದು ರಾಜನ ತೊಡೆಯ ಮೇಲೆ ಚಪ್ಪಲಿಯನ್ನು ಹಾಕಿ ವೇಗದಿಂದ ಹಾರಿ ಹೋಯಿತು.ರಾಜ ಚಪ್ಪಲಿಯನ್ನು ದಿಟ್ಟಿಸಿ ನೋಡಿದನು. ಚಪ್ಪಲಿ ತುಂಬಾ ಸುಂದರವಾಗಿರುವುದನ್ನು ಕಂಡನು.

ರಾಜನು ಮಂತ್ರಿಯಲ್ಲಿ 'ಈ ಚಪ್ಪಲಿಯೇ ಇಷ್ಟೊಂದು ಸುಂದರವಾಗಿರಬೇಕಾದರೆ ಇದನ್ನು ಧರಿಸುವ ಹುಡುಗಿ ಎಷ್ಟೊಂದು ಆಕರ್ಷಕವಾಗಿರಬಹುದು. ಆ ಹುಡುಗಿಯನ್ನು ನಾನು ಮದುವೆಯಾದರೆ ತನ್ನ ಕೀರ್ತಿ ಮತ್ತಷ್ಟು ಹೆಚ್ಚುತ್ತದೆ' ಎಂದು ನುಡಿದಾಗ ಸಭೆಯಲ್ಲಿ ಸೇರಿದ್ದವರೆಲ್ಲರೂ 'ತಮ್ಮ ರಾಜ ಅದೇ ಹುಡುಗಿಯನ್ನು ಮದುವೆಯಾಗಲಿ' ಎಂದು ಒಕ್ಕೊರಲಿನಿಂದ ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ರಾಜನು ತನ್ನ ಭಟರಲ್ಲಿ ಇಂತಹದೇ ಇನ್ನೊಂದು ಚಪ್ಪಲಿಯಿರುವ ಹುಡುಗಿ ಎಲ್ಲೇ ಇರಲಿ ಅವಳನ್ನು ಕೂಡಲೇ ಹುಡುಕಿಕೊಂಡು ಬರುವಂತೆ ಆಜ್ಞಾಪಿಸಿದನು. ರಾಜನ ಆಜ್ಞೆಯಂತೆ ಅವನ ಭಟರು ರಾಜ್ಯದ ಮೂಲೆ ಮೂಲೆಗೂ ಹೋಗಿ ಹುಡುಕಿದರು. ವಾರದ ನಂತರ ಖರಾನ ಮನೆಯಲ್ಲಿರುವ ರೋಸ್ ಎಂಬ ಹುಡುಗಿಯ ಚಪ್ಪಲಿಯೆಂದು ಅವರಿಗೆ ತಿಳಿಯಿತು. ರಾಜ ಭಟರು ಬಂದಿರುವ ವಿಷಯವನ್ನು ಖರಾನಿಗೆ ತಿಳಿಸಿದರು. ಅಲ್ಲದೇ ರಾಜನು ರೋಸ್ ಜೊತೆ ಮದುವೆಯಾಗಲು ಇಷ್ಟಪಟ್ಟಿರುವುದಾಗಿ ಹೇಳಿದರು. ರಾಜ ಭಟರು ಹೇಳಿದ ಸಿಹಿ ಸುದ್ದಿಯನ್ನು ಕೇಳಿ ಖರಾನಿಗೆ ತುಂಬಾ ಸಂತೋಷವಾಯಿತು. ಖರಾನೇ ತನ್ನ ಮಗಳನ್ನು ರಾಜನ ಬಳಿಗೆ ಕರೆದುಕೊಂಡು ಹೋದನು. ಅರಮನೆಯಲ್ಲಿ ವಿಜೃಂಭಣೆಯಿಂದ ರೋಸ್ ಮತ್ತು ರಾಜನ ವಿವಾಹವೂ ನಡೆಯಿತು.

ಖರಾ ದಂಪತಿಗಳಿಗೆ ರೋಸ್ ಜೀವನ ಪರ್ಯಂತ ಆಭಾರಿಯಾಗಿದ್ದಳು. ಅಂದು ಅವಳನ್ನು ಅಪತ್ತಿನಿಂದ ಪಾರು ಮಾಡಿ ಸುಖ ಸಂತೋಷದ ಜೀವನ ಕೊಟ್ಟಿರುವುದನ್ನು ಅವಳೆಂದೂ ಮರೆಯದೇ ಅವರಿಬ್ಬರನ್ನೂ ಅಕ್ಕರಯಿಂದ ನೋಡಿಕೊಳ್ಳುತ್ತಿದ್ದಳು. ■



# ಶಿಶುಪ್ರಾಸಗಳು

■ ಲಕ್ಷ್ಮಣ್ ಜಮದಾಡ ಅರ್ಜುಣಗಿ

ಚಿತ್ರಗಳು: ವಿಜಯಕುಮಾರಿ

**ಚಂದ್ರ**

ಏನ್ ಚೆಂದ
ಎಂಥಾ ಚೆಂದ
ಮುಗಿಲಾನ ಚಿಕ್ಕಿ ಚಂದ್ರ
ಯಾರ ಮದುವಿಗಿ
ಹಾಕ್ಯಾರವ್ವ
ಇಂಥಾ ಚೆಂದದ ಹಂದ್ರ ?



**ಪಾತರಗಿತ್ತಿ**

ಪಾತರಗಿತ್ತಿ
ಎಲ್ಲಿಂದ್ ತಂದಿ ?
ಬಣ್ಣದ ಕುಸುರಿ ಅಂಗಿ
ನನ್ನ ಅಂಗಿ
ಬೇಡತಾಳ
ನನ್ನ ಮುದ್ದಿನ ತಂಗಿ

**ಹಪ್ಪಳ**

ಅವ್ವಾ ಮಾಡ್ಯಾಳ ಹಪ್ಪಳ
ಕರ್‍ರಂ ಕುರ್‍ರಂ ಸಪ್ಪಳ
ಕಾಗಿ ಬಂತು
ಕಾವ್ ಕಾವ್ ಅಂತು
ಕೈಯಾನ ಹಪ್ಪಳ
ಕಸ್ಗೊಂಡ್ ಹೋಯ್ತು

**ಹಕ್ಕಿ**

ಹಾರಿ ಬಂತೊಂದು
ಹಕ್ಕಿ
ರೆಂಬೆಗೆ ಕೊಕ್ಕನು
ತಿಕ್ಕಿ
ಹಣ್ಣನು ತಿಂದಿತು
ಕುಕ್ಕಿ
ಹಾಡಿತು ಹರ್ಷವ
ಉಕ್ಕಿ ■

